**ದಿನಾಂಕಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಜಿ ಎಂ ವೈ ವಕೀಲರಿಂದಃ**

ನನ್ನ ತಂದೆಯವರು ತೀರಿಕೊಳ್ಳುವ ಒಂದು ವರ್ಷದ ಮೊದಲವರೆವಿಗೂ ಬಂದಿರುತ್ತಾರೆ. ನನ್ನ ತಂದೆಯವರಿಗೆ ಪಾರ್ಶ್ವವಾಯು ರೋಗವಾಗಿತ್ತು. ಪಾರ್ಶ್ವವಾಯು ವಾದ ಒಂದು ವರ್ಷದ ವರೆವಿಗೂ ಬದುಕಿದ್ದರು. ಅವರನ್ನು ಬೆಂಗಳೂರಿನ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬಂದಿರುತ್ತಾರೆ. ಒಂದು ತಿಂಗಳು ಆಸ್ಪತ್ರೆಯಲ್ಲಿ ಇದ್ದ ಬಗ್ಗೆ ತಿಳಿಸಿರುತ್ತಾರೆ ನಾನು ಎರಡು ಸಲ ಹೋಗಿ ನೋಡಿಕೊಂಡು ಬಂದಿರುತ್ತೇನೆ. ನಾನು ನನ್ನ ತಂದೆಯ ಪಾಲನೆ ಪೋಷಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಬೇಲದಕೆರೆಗೆ ಬಂದು ಉಳಿದಿರುತ್ತೇನೆ. ನನ್ನ ಮಕ್ಕಳು ಸಹ ಇಲ್ಲಿಗೆ ಬಂದು ಉಳಿದಿರುತ್ತಾರೆ ಆಗ ದಸರಾ ಸಮಯವಾಗಿರುತ್ತದೆ ಅಕ್ಟೊಬರ್ 2020 ಇರಬಹುದು. ಎರಡು ತಿಂಗಳು ಆದ ನಂತರ ಅವರು ಚೆನ್ನಾಗಿದ್ದರು ಆದ ಕಾರಣ ಹೋಗಿರುತ್ತೆನೆ. ನನ್ನ ತಂದೆಯವರು ಆಸಪತ್ರೆಯಲ್ಲಿ ಇದ್ದಾಗ ಎಷ್ಟು ಹಣ ಖರ್ಚಾಗಿದೆ ಎಂದು ಗೊತ್ತಿಲ್ಲ . ನಾನು ನನ್ನ ಗಂಡನ ಮುಖಾಂತರ ಅವರಿಗೆ ಹಣ ಕೊಟ್ಟಿರುತ್ತೆನೆ ನನ್ನ ತಾಯಿ ಸಹ ಕೊಟ್ಟಿರುತ್ತಾರೆ ಎಷ್ಟು ಹಣ ಎಂದು ನೆನಪಿಲ್ಲ. ಆಸ್ಪತ್ರೆಯಲ್ಲಿ ಇದ್ದಾಗಲೇ ನನ್ನ ಚಿಕ್ಕಮ್ಮನ ಕಡೆಗೆ ಕೊಟ್ಟಿರುತ್ತಾರೆ. ಆಸ್ಪತ್ರೆಯಲ್ಲಿ ಒಟ್ಟು ಎಷ್ಟು ಹಣ ಖರ್ಚಾಯಿತು ಎಂದು ಗೊತ್ತಿಲ್ಲ ಕೇಳಿದ್ದಕ್ಕೆ ನಿನಗೇ ಏಕೆ ಎಂದು ಹೇಳಿರುತ್ತಾರೆ. ಯಾರು ಯಾರು ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂದು ಗೊತ್ತಿಲ್ಲ. ನಾವು ಎಷ್ಟು ಭಾಗ ಹಣ ಕೊಡಬೇಕು ಎಂದು ಕೇಳಿದ್ದಕ್ಕೆ ಭಾಗದ ಆಸ್ತಿ ಎಲ್ಲಾ ಆಸ್ಪತ್ರೆ ಮತ್ತು ತಿಥಿಗೆ ಖರ್ಚಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ಲೆಕ್ಕ ತೋರಿಸಲು ಕೇಳಿದ್ದೀರಾ ಎಂದರೆ ಕೇಳಿದ್ದೆವು ಅವರೇನೂ ಸರಿಯಾಗಿ ಹೇಳಿರುವುದಿಲ್ಲ. ಜಮೀನು ಮಾರಾಟ ಮಾಡಿರುವುದನ್ನು ನಮಗೇನೂ ಹೇಳಿರುವುದಿಲ್ಲ.

**(ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ